ಹನುಮಂತಪ್ಪ ಪೂಜಾರ್‌ರವರು ಸರ್ಕಾರ ನೀಡಿದ ಭರವಸೆಗೆ ಒಪ್ಪಿ ಧರಣಿಯನ್ನು ಹಿಂತೆಗೆದುಕೊಂಡು ಆಸನಕ್ಕೆ ಮರಳಿದರು)

ಕ) ಗ್ರಾಮಸಭೆಯಲ್ಲಿ ನಿರ್ಧರಿಸಿದಂಥ ಫಲಾನುಭವಿಗಳಿಗೆ ಆಶ್ರಯ ಯೋಜನೆ

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಉಪಾಧ್ಯಕ್ಷರೆ, ಯಾವುದೇ ಯೋಜನೆಯ ಫಲಾನುಭವಿಗಳ ಪಟ್ಟಿಯನ್ನು ಗ್ರಾಮಸಭೆಯು ತಯಾರಿಸಬೇಕಾಗಿದ್ದು ಪಟ್ಟಿಯನ್ನು ತಯಾರಿಸುವ ಅಧಿಕಾರ ಕಾನೂನಿನಡಿ ಗ್ರಾಮಸಭೆಗೆ ಪ್ರಾಪ್ತವಾಗಿರುತ್ತದೆ. ಅಲ್ಲದೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ವಿಚಾರಧಾರೆಯೂ ಕೂಡ ಅದಕ್ಕೆ ಪೂರಕವಾಗಿದೆ. ಆದರೆ, ಹಿರೇಕೆರೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಭಾಗ್ಯಜ್ಯೋತಿ ಯೋಜನೆಯಡಿ ಫಲಾನುಭವಿಗಳ ಯಾದಿಯನ್ನು ತಾಲ್ಲೂಕು ಪಂಚಾಯಿತಿ ಸಮಿತಿಯ ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ಸಿದ್ಧಪಡಿಸಿ ಕಳುಹಿಸಿರುತ್ತಾರೆ. ಗ್ರಾಮಸಭೆಯು ಆಯ್ಕೆ ಮಾಡಿದಂಥ ಪಟ್ಟಿಯನ್ನು ಅವರು ಗಣನೆಗೆ ತೆಗೆದುಕೊಂಡಿಲ್ಲ. ಇದರಿಂದಾಗಿ ಗ್ರಾಮ ಪಂಚಾಯಿತಿಯವರಿಗೆ ಗ್ರಾಮಸಭೆಯಲ್ಲಿ ನಾಗರೀಕರ ಪ್ರಶ್ನೆಗಳಿಗೆ ಉತ್ತರ ಹೇಳದಿರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ ನಿಯಮ ಬಾಹಿರವಾಗಿ ತಾಲ್ಲೂಕು ಪಂಚಾಯಿತಿ ಸಮಿತಿ ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ಕಳುಹಿಸಿರುವ ಫಲಾನುಭವಿಗಳ ಪಟ್ಟಿಯನ್ನು ತಡೆಹಿಡಿದು ಗ್ರಾಮಸಭೆಯವರು ಕಳುಹಿಸಿರುವ ಫಲಾನುಭವಿಗಳ ಪಟ್ಟಿಗೆ ಆದ್ಯತೆ ನೀಡಬೇಕೆಂದು ನಾನು ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ಶಾಸಕರು ಹೇಳಿರುವಂತೆ ಗ್ರಾಮಸಭೆಯಲ್ಲಿ ನಿರ್ಧರಿಸಿದಂಥ ಫಲಾನುಭವಿಗಳ ಪಟ್ಟಿಯನ್ನು ಆಶ್ರಯ ಯೋಜನೆಗೆ ಸಂಬಂಧಿಸಿದಂತೆ ಇದ್ದರೆ ಆಶ್ರಯ ಸಮಿತಿಯ ಅಧ್ಯಕ್ಷರಾದ ತಾವು ಪರಿಶೀಲಿಸಿ ಅಲ್ಲಿಂದ ಬಂದಿರುವಂಥ ಯಾದಿಯಲ್ಲಿಯೇ ಆದ್ಯತೆ ಮೇರೆಗೆ ತಾವು ಕೊಡಬೇಕಾಗುತ್ತದೆ. ಭಾಗ್ಯಜ್ಯೋತಿ ಯೋಜನೆಗೂ ಕೂಡ ಇದೇ ಅನ್ವಯವಾಗುತ್ತದೆ. ಭಾಗ್ಯಜ್ಯೋತಿ ಯೋಜನೆ ವಿಚಾರದಲ್ಲಿ ತಾವು ಪತ್ರ ಬರೆದಿರುವುದರಿಂದ ಈ ದಿವಸವೇ ದೂರವಾಣಿ ಮೂಲಕ ತಿಳಿಸಿ ಅಲ್ಲಿಂದ ವರದಿ ತರಿಸಿಕೊಂಡು ತಾವು ಹೇಳಿದಂತೆ ಆ ರೀತಿಯ ಅಕ್ರಮವಾಗಿದ್ದರೆ, ಕಡೆಗಣಿಸಿದ್ದರೆ ತಡೆಹಿಡಿಯಬೇಕು ಮತ್ತು ಆ ವಿಚಾರದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿರುವ ಆಶ್ರಯ ಸಮಿತಿ ನಿರ್ಧರಿಸಿದಂತೆಯೇ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸುತ್ತೇನೆ.

ಖ) ಬಾದಾಮಿ ಹಾಗೂ ಹುನಗುಂದ ತಾಲ್ಲೂಕಿನ ಭಾಗಗಳಲ್ಲಿ ಸಾರಾಯಿ ಗುತ್ತಿಗೆದಾರರಿಂದ ಆಗುತ್ತಿರುವ ದಬ್ಬಾಳಿಕೆ

ಶ್ರೀ ರಾಜಶೇಖರ ವೀರಣ್ಣ ಶೀಲವಂತ (ಗುಳ್ಳೇದ ಗುಡ್ಡ) : ಮಾನ್ಯ ಉಪಾಧ್ಯಕ್ಷರೆ, ನನ್ನ ಮತ ಕ್ಷೇತ್ರವೂ ಸೇರಿದಂತೆ ಬಾದಾಮಿ ಹಾಗೂ ಹುನಗುಂದ ತಾಲ್ಲೂಕಿನ ಭಾಗಗಳಲ್ಲಿ ಸಾರಾಯಿ ಗುತ್ತಿಗೆದಾರರು ಒಂದು ರೀತಿಯ ಪಾಳೇಗಾರರಂತೆ ವರ್ತಿಸುತ್ತಿದ್ದಾರೆ. ಮೊನ್ನೆ ದಿನಾಂಕ 21-3-99 ರಂದು ಕೋಟನಳ್ಳಿ ಗ್ರಾಮದ ಸೋನವ್ವ ಹುಲ್ಲಪ್ಪ ರಾತೋಡ್ ಎನ್ನುವ ಮಹಿಳೆ ಮನೆಗೆ ಸಾರಾಯಿ ಗುತ್ತಿಗೆದಾರರಿಗೆ

ಸಂಬಂಧಿಸಿದ ಖಾಸಗಿ ವ್ಯಕ್ತಿಗಳು ರಾತ್ರಿ 9.00 ಗಂಟೆಗೆ ನುಗ್ಗಿ ಅವಳನ್ನು ಎಳೆದಾಡಿ ಆಕೆಯ ಮೇಲೆ ಮಾನಭಂಗ ಮಾಡಲು ಯತ್ನಿಸಿದಾಗ ಗ್ರಾಮಸ್ಥರು ಬಂದು ಬಿಡಿಸಿದಾಗ ಸಾರಾಯಿ ಗುತ್ತಿಗೆದಾರರ ಖಾಸಗಿ ಸಿಪಾಯಿಗಳ ವರ್ತನೆಯಿಂದ ಕೋಪಗೊಂಡು ಆ ಮಹಿಳೆ, ಆಕೆಯ ಪತಿ ಹಾಗೂ ಮಗಳು ಮೂರು ಜನ ಸೇರಿ ತಕ್ಷಣವೇ ಆ ರಾತ್ರಿಯೇ ಪೋಲಿಸ್ ಠಾಣೆಗೆ ತೆರಳಿ ಕಂಪ್ಲೇಂಟ್ ಕೊಟ್ಟು ನನ್ನ ಮನೆಗೂ ಸಹ ಬಂದು ತನ್ನ ಮೇಲೆ ಅವರಿಗೆ ಕರುಣೆಯಿಲ್ಲದೆ ಈ ರೀತಿ ವರ್ತಿಸಿದುದ್ದನ್ನು ವಿವರಿಸಿ ಅತ್ತು ಗೋಳಾಡಿದಾಗ ಈಗ ರಾತ್ರಿಯಾಗಿರುವುದರಿಂದ ಬೆಳಿಗ್ಗೆ ಪೋಲಿಸ್ ಠಾಣೆಗೆ ಹೋಗಿ ಕಂಪ್ಲೇಂಟ್ ಕೊಡೋಣವೆಂದು ಹೇಳಿ ಕಳುಹಿಸಿದೆ. ಮರುದಿನ ಕಂಪ್ಲೇಂಟ್ ಕೊಡಲು ಪೋಲೀಸ್ ಠಾಣೆಗೆಕಳುಹಿಸಿದೆ. ಆಕೆಯನ್ನು ಬೆಳಿಗ್ಗೆಯಿಂದ ಸಂಜೆಯವರೆವಿಗೂ ಠಾಣೆಯಲ್ಲಿಯೇ ಕುಳ್ಳರಿಸಿಕೊಂಡರು.

ಅವಳ ಮೇಲೆ ಅತ್ಯಾಚಾರವಾಗಿದೆ; ಅತ್ಯಾಚಾರ ಮಾಡುವ ಪ್ರಯತ್ನವಾಗಿದೆ. ಇಂಥಹ ಸಂದರ್ಭದಲ್ಲಿ ಇದರ ಬಗ್ಗೆ ದೂರು ಕೊಡಲು ಪೋಲಿಸ್ ಠಾಣೆಗೆ ಹೋದರೆ ಅಲ್ಲಿನ ಸಿ.ಪಿ.ಐ. ಹಾಗೆ ಮಾಡುತ್ತೇನೆ, ಹೀಗೆಮಾಡುತ್ತೇನೆ, ಅವರಿಗೆಎಚ್ಚರಿಕೆಯನ್ನು ನೀಡುತ್ತೇನೆಂದು ಹೇಳಿ ಸಂಜೆಯವರೆಗೆ ಆ ಮಹಿಳೆಯನ್ನು ಪೋಲಿಸರು ಠಾಣೆಯಲ್ಲೇ ಕೂರಿಸಿದ್ದರು. ಈ ವಿಚಾರ ನನಗೆ ತಿಳಿದ ತಕ್ಷಣ ನಾನು ಒತ್ತಾಯ ಮಾಡಿ ದೂರನ್ನು ಕೊಡಿಸಿದೆ. ಯಾರು ಅವಳ ಮೇಲೆ ಹಲ್ಲೆ ಮಾಡಿ ಅತ್ಯಾಚಾರ ಮಾಡಲು ಪ್ರಯತ್ನ ಪಟ್ಟರೋ ಅವರನ್ನು ಇದುವರೆಗೂ ಬಂಧಿಸಿಲ್ಲ ಮತ್ತು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ನಮ್ಮ ಬದಾಮಿ ತಾಲ್ಲೂಕಿನಲ್ಲಿ ಪೋಲಿಸ್ ಇಲಾಖೆ ಈ ರೀತಿ ವರ್ತನೆ ಮಾಡುತ್ತಿದೆ. ಸಾರಾಯಿಗೆ ಸಂಬಂಧಪ್ಪಟಂತೆ ಅಬ್ಕಾರಿ ಇಲಾಖೆಯು ಕೆಲಸವನ್ನೇ ಮಾಡುತ್ತಿಲ್ಲ. ಇದರ ಜೊತೆಗೆ ಕಳ್ಳಭಟ್ಟಿ, ಲೇಬಲ್ ಇಲ್ಲದ ಸಾರಾಯಿ ಬಹಳವಾಗಿ ವ್ಯಾಪಾರವಾಗುತ್ತಿರುವ ಬಗ್ಗೆ ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿ ವರದಿಯಾಗಿದೆ. ಇದರ ಬಗ್ಗೆ ಸಂಬಂಧಪಟ್ಟ ಇಲಾಖೆಯ ಆಯುಕ್ತರಿಗೆ ಭೇಟಿ ಮಾಡಿ ವರದಿ ನೀಡಿದ್ದೆ. ಮತ್ತು ಸಂಬಂಧಪಟ್ಟ ಸಚಿವರಿಗೂ ಲಿಖಿತ ಮೂಲಕ ಪತ್ರವನ್ನು ಬರೆದಿದ್ದೆ. ಆದರೂ ಸಹ ಇದರ ಬಗ್ಗೆ ಯಾವುದೇ ಕ್ರಮ ತೆಗೆದು ಕೊಂಡಿಲ್ಲ. ಅಲ್ಲಿ ಕಳ್ಳಭಟ್ಟಿ ವ್ಯಾಪಾರ ಅವ್ಯಾಹತವಾಗಿ ನಡೆಯುತ್ತಿದೆ. ಸಾರಾಯಿ ಗುತ್ತಿಗೆದಾರರು ನಕಲಿ ಸಾರಾಯಿ ಪ್ಯಾಕೇಟುಗಳನ್ನು ಮಾರಾಟ ಮಾಡುತ್ತಿದ್ದಾರೆ. ಹಳ್ಳಿಗಳಲ್ಲಿ ಇನ್ನೂ ಅಂಗಡಿಗಳನ್ನು ತೆರೆಯಲು ಅನುಮತಿ ಕೊಟ್ಟಿದ್ದಾರೆಅದಕ್ಕಿಂತಹೆಚ್ಚಾಗಿ ಅಂಗಡಿಗಳನ್ನು ತೆರೆದು ಸಾರಾಯಿ ಮಾರಾಟ ಮಾಡುತ್ತಿದ್ದಾರೆ. ಇದರ ಬಗ್ಗೆ ದೂರು ಕೊಟ್ಟರು ಯಾವುದೇ ರೀತಿಯಾದ ಕ್ರಮ ತೆಗೆದುಕೊಂಡಿಲ್ಲ. ಹುಲುಗುಂದ ಮತ್ತು ಬಾದಾಮಿ ತಾಲ್ಲೂಕಿನಲ್ಲಿ ಇದು ಬಹಳ ದೊಡ್ಡ ಸಮಸ್ಯೆಯಾಗಿದೆ. ಅಮಾಯಕಜನರು ಗುತ್ತಿಗೆದಾರರಿಂದ ಏಟು ತಿನ್ನುತ್ತಿದ್ದಾರೆ. ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಬೇಕು ಮತ್ತು ಸಂಬಂಧಪಟ್ಟವರನ್ನು ಕೂಡಲೇ ಅರೆಸ್ಟ್ ಮಾಡಬೇಕು. ಜೊತೆಗೆ ಆ ಮಹಿಳೆಯ ಮೇಲೆ ದಬ್ಬಾಳಿಕೆ ಮಾಡಲು ಬಂದವರನ್ನು ಸಹ ಅರೆಸ್ಟ್ ಮಾಡಬೇಕು.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಸಾರಾಯಿ ಗುತ್ತಿಗೆದಾರರಿಗೂ ಕಳ್ಳಭಟ್ಟಿ ಸರಬರಾಜು ಮಾಡುವವರ ಮಧ್ಯ ಪದೆ ಪದೆ ಈ ರೀತಿ ಘರ್ಷಣೆಗಳಾಗುವುದನ್ನು ನಾವು ಕಂಡಿದ್ದೇವೆ. ಆದರೆ ಸಾರಾಯಿ ಗುತ್ತಿಗೆದಾರರು ಕಾನೂನನ್ನು ತಮ್ಮ ಕೈಗೆ ತೆಗೆದು ಕೊಂಡು ಬೇರೆಯವರ ಮೇಲೆ ಹಲ್ಲೆ ಮಾಡತಕ್ಕ ಅಧಿಕಾರ ಇಲ್ಲ. ಒಂದು ವೇಳೆ ಅತ್ಯಾಚಾರ ಮಾಡಿದ್ದಾರೆ

ಎಂಬ ಬಗ್ಗೆ ದೂರು ದಾಖಲಾಗಿದ್ದರೆ ಅದರ ಪ್ರಕಾರ ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ಸಂಬಂಧಪಟ್ಟ ಮಂತ್ರಿಗಳ ಶಾಖೆಯಿಂದ ಆದೇಶವನ್ನು ಕಳುಹಿಸಿಕೊಡುತ್ತೇನೆ. ಅನಧಿಕೃತವಾಗಿ ಸಾರಾಯಿ ಅಂಗಡಿಗಳನ್ನು ಇಟ್ಟುಕೊಂಡಿದ್ದರೆ ಅಬ್ಕಾರಿ ಇಲಾಖೆಯ ಮೂಲಕ ಅವೆಲ್ಲವನ್ನೂ ಮುಚ್ಚಿಸತಕ್ಕ ಕೆಲಸ ಮಾಡುತ್ತೇವೆ.

ಶ್ರೀ ರಾಜಶೇಖರ ವೀರಣ್ಣ ಶೀಲವಂತ್ : ಅವರನ್ನು ಇವತ್ತೇ ಅರೆಸ್ಟ್ ಮಾಡಲು ಸೂಚಿಸಬೇಕು. 21ರಂದು ಈ ಘಟನೆಯಾಗಿದೆ, ಇದುವರೆಗೆ ಆ ಮೂರು ಜನರು ಅರಸ್ಟ್ ಆಗಿಲ್ಲ. ಆದ್ದರಿಂದ ಇವತ್ತೇ ಅರೆಸ್ಟ್ ಮಾಡಲು ಇಲಾಖೆಗೆ ತಿಳಿಸಬೇಕು.

ಶ್ರೀ ಎಂ. ಪಿ. ಪ್ರಕಾಶ್ : ಅದು ಯಾವ ಕಾನೂನಿನ ಅಡಿಯಲ್ಲಿ ನೋಂದಾಯಿಸಲ್ಪಟ್ಟಿದೆ ಎಂಬುದು ಮುಖ್ಯ. There are certain Sections which are bailable. ಆದ್ದರಿಂದ ಅವರನ್ನು ಅಲ್ಲೇ ಎನ್‌ಲಾರ್ಜ್ ಮಾಡಿ ಬಿಟ್ಟಿರಬಹುದು. ಆದ್ದರಿಂದ ಅಲ್ಲಿ ವಿಚಾರವೇನಿದೆ ಎಂಬುದನ್ನು ನಮ್ಮ ಪೋಲಿಸ್ ಅಧಿಕಾರಿಗಳ ಮೂಲಕ ವರದಿಯನ್ನು ತರಿಸಿ ತಮಗೆ ತಿಳಿಸುತ್ತೇನೆ.

(ಗ) ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರ ಸಹಕಾರಿ ಬ್ಯಾಂಕಿನ ಚುನಾವಣೆ

ಶ್ರೀ ಡಿ. ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಉಪಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರ ಸಹಕಾರಿ ಬ್ಯಾಂಕಿನ ಚುನಾವಣೆ ಈಗಾಗಲೇ ನಡೆದಿದೆ. ನಾಳೆ ಅಲ್ಲಿನ ಅಧ್ಯಕ್ಷರ ಚುನಾವಣೆ ನಡೆಯಬೇಕಾಗಿದೆ. ಅಲ್ಲಿ ಸುಕುಮಾರಶೆಟ್ಟಿ ಎಂಬುವವರು ನಿರ್ದೇಶಕರಾಗಿ ಆಯ್ಕೆಯಾಗಿ ಬಂದಿರುತ್ತಾರೆ. ನಾಳೆಯ ಅಧ್ಯಕ್ಷರ ಚುನಾವಣೆಯಲ್ಲಿ ಸುಕುಮಾರಶೆಟ್ಟಿಯವರು ಮತದಾನ ಮಾಡದಂತೆ ಮತ್ತು ಸ್ಪರ್ಧೆ ಮಾಡದಂತೆ ಅವರ ನಿರ್ದೇಶಕ ಸ್ಥಾನಕ್ಕೆ ಮೈಸೂರಿನ ರಿಜಿಸ್ಟ್ರಾರ್‌ರವರು ತಡೆಯಾಜ್ಞೆ ಕೊಟ್ಟಿದ್ದಾರೆಂದು ನನಗೆ ತಿಳಿದು ಬಂದಿದೆ. ಯಾವುದೇ ಚುನಾಯಿತ ಅಭ್ಯರ್ಥಿಯನ್ನು ಯಾವುದೇ ಅಧ್ಯಕ್ಷರ ಚುನಾವಣೆಯಲ್ಲಿ ಇಲ್ಲವೆ ಮತ್ತೊಂದರಲ್ಲಿ ಭಾಗವಹಿಸದಂತೆ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ. ಅವನ ಚುನಾವಣಾ ಸಿಂಧುತ್ವದ ಬಗ್ಗೆ ಮಾತ್ರ ಪ್ರಶ್ನೆ ಮಾಡಲು ಅವಕಾಶವಿದೆ. ಜಿಲ್ಲಾ ಸಹಕಾರಿ ಬ್ಯಾಂಕ್ ಮಂಗಳೂರು ಇಲ್ಲಿ ಬೇಕಾದಷ್ಟು ಅವ್ಯವಹಾರಗಳು ನಡೆದಿರುವುದು ತಮ್ಮ ಗಮನಕ್ಕೆ ಈಗಾಗಲೇ ಬಂದಿದೆ. ಸುಕುಮಾರಶೆಟ್ಟಿಯವರು ನಾಳಿನ ಚುನಾವಣೆಯಲ್ಲಿ ಭಾಗವಹಿಸದಂತೆ ಮಾಡಲು ಸೂಕ್ತ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಉಪಾಧ್ಯಕ್ಷರೆ, ಮಂಗಳೂರು ಸಹಕಾರಿ ಬ್ಯಾಂಕ್ ರಾಜಕೀಯ ವ್ಯವಸ್ಥೆಯಲ್ಲಿ ಈಗಾಗಲೇ ತೊಡಗಿಸಿಕೊಂಡು ಚುನಾಯಿತ ನಿರ್ದೇಶಕರನ್ನು ನಾಳಿನ ಅಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸದಂತೆ ಷಡ್ಯಂತರ ಹೂಡುತ್ತಿದ್ದಾರೆ. ಆದ್ದರಿಂದ ಇವರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕು. ನಾಳೆಯ ಚುನಾವಣೆಯಲ್ಲಿ ಇವರಿಗೆ ಮತದಾನ ಮಾಡುವ ಅವಕಾಶ ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರದಲ್ಲಿ ವಿನಂತಿಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಸುಕುಮಾರ ಶೆಟ್ಟಿಯವರು ಅಧ್ಯಕ್ಷರ ಚುನಾವಣೆಯಲ್ಲಿ ಮತದಾನ ಮಾಡದಂತೆ ತಡೆಯಾಜ್ಞೆ ಕೊಟ್ಟಿದ್ದಾರೆಂದು ಅವರು ಹೇಳಿದ್ದಾರೆ. ನಿಯಮ 70ರ ಪ್ರಕಾರ ಏನಾದರೂ ಕೋರ್ಟಿನಲ್ಲಿ ಕೇಸ್ ಹಾಕಿ ಆ ರೀತಿ